**ಪತ್ರಿಕಾ ಪ್ರಕಟಣೆ**

**ವಿಜಯಪುರ**
**ದಿನಾಂಕ: 24.07.2021.**

**1] ಸಿಂದಗಿ ಪೊಲೀಸ ಠಾಣೆ ಗುನ್ನೆ ನಂ: 205/2021 ಕಲಂ: 279, 304 [ಎ] ಐಪಿಸಿ.**

ದಿನಾಂಕ: 23.07.2021 ರಂದು 19:45 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಮೃತ ಮಹಾಂತೇಶ ಶಿವಪ್ಪ ಸೊನ್ನದ ಸಾ; ಯರಗಲ್ (ಕೆ.ಡಿ) ತಾ:ಸಿಂದಗಿ ಮೋಟಾರ ಸೈಕಲ್ ನಂಬರ ಕೆಎ:28 ಇ.ಎಚ್:0641 ನೇದ್ದರ ನೇದ್ದರ ಚಾಲಕ. ಈತನು ತನ್ನ ವಯಕ್ತಿಕ ಕೆಲಸದ ಸಲುವಾಗಿ ತನ್ನ ಮೋಟಾರ ಸೈಕಲ್ ನೇದ್ದರ ಮೇಲೆ ಸಿಂದಗಿಗೆ ಹೋಗಿ ಬರುತ್ತೇನೆ ಅಂತಾ ಹೋಗಿ ಪರತ ವಿಜಯಪೂರ–ಕಲಬುರ್ಗಿ ಎನ್.ಎಚ್ 50 ಸಾರ್ವಜನಿಕ ರಸ್ತೆ ಮಾರ್ಗವಾಗಿ ಯರಗಲ್ ಕೆ.ಡಿ ಗ್ರಾಮಕ್ಕೆ ಬರುವಾಗ ಸಾಯಂಕಾಲ 7:45 ಗಂಟೆ ಸುಮಾರಿಗೆ ತಾನು ನಡೆಸುತಿದ್ದ ಮೋಟರ ಸೈಕಲ್‌ನ್ನು ಅತೀ ಜೋರಾಗಿ ಮತ್ತು ನಿಷ್ಕಾಳಜೀತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಯಿಸಿಕೊಂಡು ಹೊರಟು ಸಿಂದಗಿ ನಗರದ ಲೋಯಲಾ ಶಾಲೆ ದಾಟಿದ ಮೇಲೆ ಇರುವ ಕರವಿಂಗ್ ಹತ್ತಿರ ತನ್ನಿಂದ ತಾನೇ ಮೋಟಾರ ಸೈಕಲ್ ಸ್ಕಿಡ್ ಮಾಡಿ ಮೋಟರ ಸೈಕಲ್ ಸಮೇತ ಬಿದ್ದು, ಅಪಘಾತ ಹೊಂದಿ ಅಪಘಾತದಲ್ಲಿ ಬಲ ಹಣೆಯ ಮೇಲ್ಭಾಗದ ಮೂಲೆಯಲ್ಲಿ ಭಾರಿ ರಕ್ತ ಗಾಯ ಪೆಟ್ಟು ಆಗಿ, ತಲೆಯ ಮೇಲೆ ತೆರಚಿದ ಗಾಯ ಹೊಂದಿ ಸ್ಥಳದಲ್ಲಿಯೇ ಮೃತಪಟ್ಟಿದ್ದು ಇರುತ್ತದೆ. ಈ ಬಗ್ಗೆ ರಾಮಣ್ಣ ಶಿವಪ್ಪ ಸೊನ್ನದ. ಸಾ; ಯರಗಲ್ (ಕೆ.ಡಿ.) ತಾ; ಸಿಂದಗಿ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 23.07.2021 ರಂದು ಸಿಂದಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 218/2021 ಕಲಂ: 87 ಕೆಪಿ ಆ್ಯಕ್ಟ**

ದಿನಾಂಕ 23.07.2021 ರಂದು 16:15 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1) ಮೈಬೂಬ ಸಾಹೇಬಲಾಲ ಶೇಖ 2) ಸಂಪತ ದುಂಡಪ್ಪ ಗಡ್ಡಿ 3) ರಾಮನಗೌಡ ಮಲ್ಲನಗೌಡ ಬಿರಾದಾರ 4) ಯಲ್ಲಪ್ಪ ವಿಠ್ಠಲ ವಾಡೆದ 5) ಹಾಜೀಲಾಲ ರಸೂಲ ಉಕ್ಕಲಿ 6) ಆನಂದ ಕಾಂತಪ್ಪ ಬಾಗೇವಾಡಿ 7) ಅಬ್ದುಲಕರೀಮ ಬಂದಗಿಸಾಬ ಕೋರಬು 8) ವಿಠ್ಠಲ ಬೀಮಪ್ಪ ಬಂಡೆನ್ನವರ 9) ಲಾಳೆಸಾಬ ಬಡೆಸಾಬ ಶೇಖ ಸಾ॥ ಎಲ್ಲರೂ ಖತಿಜಾಪೂರ ತಾ॥ ಜಿ॥ ವಿಜಯಪೂರ ಇವರು ತೊರವಿ ಗ್ರಾಮದ ಖತಿಜಾಪೂರ ಗ್ರಾಮದ ಹತ್ತಿರ ಇರುವ ಹಳ್ಳದ ಬಾಜು ಸಾರ್ವಜನಿಕ ಸ್ಥಳದಲ್ಲಿ ಕುಳಿತು ತಮ್ಮ ತಮ್ಮ ಫಾಯ್ದೇಗೋಸ್ಕರ ಇಸ್ಪೇಟ ಎಲೆಗಳ ಮೇಲೆ ಹಣವನ್ನು ಬೆಟ್ಟ ಕಟ್ಟಿ ಅಂದರ–ಬಾಹರ ಅಂಬುವ ಇಸ್ಪೇಟ ಮನ್ನಾ ಜೂಜಾಟ ಆಡುತ್ತಿದ್ದಾಗ ರೇಡ ಮಾಡಿ ಹಿಡಿದಿದ್ದು ಅದೆ. ಜಪ್ತಾದ ಮಾಲು: 1) ಹಣ–9430/– 2) 52 ಇಸ್ಪೇಟ ಎಲೆಗಳು ಕಿ॥ 00=00 ಈ ಬಗ್ಗೆ ಸ:ತ: ಎಸ್ ಬಿ ಪಾಲಭಾವಿ ಸಿಪಿಐ ವಿಜಯಪೂರ ಗ್ರಾಮೀಣ ವೃತ್ತ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 23.07,2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 219/2021 ಕಲಂ: 15(ಎ) ಮತ್ತು 32(3) ಕೆ.ಇ.ಆಕ್ಟ**

ದಿನಾಂಕ 23.07.2021 ರಂದು 19.45 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ 1] ದೇವೆಂದ್ರ ಬಾಳಪ್ಪ ಚಿಮ್ಮಗೋಳ ಸಾ॥ ಆಹೇರಿ ಈತನು ಆಹೇರಿ ಗ್ರಾಮದ ಹೊಸ ಊರಲ್ಲಿಯ ತನ್ನ ಹೊಟೇಲ್‌ದಲ್ಲಿ ತನ್ನ ಪಾಯ್ದೇಗೋಸ್ಕರ ಸಂಬಂದಿಸಿದ ಪ್ರಾಧಿಕಾರದಿಂದ ಅನುಮತಿಯನ್ನು ಪಡೆಯದೇ ಸಾರ್ವಜನಿಕರಿಗೆ ಮದ್ಯ ಸೇವನೆ ಮಾಡಲು ಅನುಮತಿ ನೀಡಿ ಸಿಕ್ಕಿ ಬಿದ್ದಿದ್ದು ಇರುತ್ತದೆ. ಈ ಬಗ್ಗೆ ಸಾ॥ತ॥ ಜಿ ಎಸ್ ಉಪ್ಪಾರ ವಿಜಯಪುರ ಗ್ರಾಮೀಣ ಪಿಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 23.07,2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ಆಲಮೇಲ ಪೊಲೀಸ ಠಾಣೆ ಗುನ್ನಾ. ನಂ: 89/2021 ಕಲಂ: 87 ಕೆ.ಪಿ.ಆಕ್ಟ**

ದಿನಾಂಕ 20.07.2021 ರಂದು 11:45 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1] ಶಿವಾನಂದ ಶರಣಪ್ಪ ದೇಗಿನಾಳ, 2] ರೆಬ್ಬಣ್ಣ ಕಲ್ಲಪ್ಪ ಗಡ್ಡಿ, 3] ಪೀರಪ್ಪ ಚನ್ನಪ್ಪ ತಾರಾಪೂರ, 4] ರೇವಣಸಿದ್ದ ಈರಣ್ಣ ಕಂಬಾರ, ಸಾ॥ ಎಲ್ಲರೂ ಗುಂದಗಿ, ತಾ॥ ಸಿಂದಗಿ, ಇವರೆಲ್ಲರೂ ಕೂಡಿಕೊಂಡು ತಮ್ಮ ತಮ್ಮ ಪಾಯ್ದದೆಗೋಸ್ಕರ ಬರುವ ಗುಂದಗಿ ಗ್ರಾಮದ ರಬಕಮ್ಮಾಯಿ ದೇವಸ್ಥಾನದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಕೇಲವು ಜನರು ಕುಳಿತುಕೊಂಡು ಪಣಕ್ಕೆ ಹಣ ಹಚ್ಚಿ ಇಸ್ಪೇಟ ಎಲೆಗಳ ಸಹಾಯದಿಂದ ಅಂದರ ಬಾಹರ ಅನ್ನುವ ಮನ್ನಾ ಜೂಜಾಟ ಆಡುತ್ತಿದ್ದಾಗ ರೋಖ ಹಣ: 1550=00/– ರೂ ಹಾಗೂ 52 ಇಸ್ಪೀಟ್ ಎಲೆಗಳ ಸಮೇತ ಆರೋಪಿತರು ಸಿಕ್ಕಿದ್ದು, ಈ ಬಗ್ಗೆ ಸ:ತ: ಸುರೇಶ್ ಆರ್ ಗಡ್ಡಿ, ಪಿಎಸ್ಐ ಆಲಮೇಲ ಪೊಲೀಸ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 23.07,2021 ರಂದು ಆಲಮೇಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**5] ಕೂಡಗಿ ಪೊಲೀಸ ಠಾಣೆ ಗುನ್ನಾ. ನಂ: 60/2021 ಕಲಂ: 78(3) ಕೆ.ಪಿ.ಆಕ್ಟ**

ದಿನಾಂಕ 22.07.2021 ರಂದು 11:45 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ ಸಂಗಪ್ಪ ಶಿವಪ್ಪ ಕೊಲಕಾರ ಸಾ॥ ಮುತ್ತಗಿ ಈತನು ಮುತ್ತಗಿ ಗ್ರಾಮದ ಕಾಡಸಿದ್ದೇಶ್ವರ ಆಶ್ರಮದ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಕುಳಿತು ಒಂದು ರೂಪಾಯಿಗೆ 80=00 ರೂಪಾಯಿ ಕೊಡುವ ಕರಾರಿನ ಮೇಲೆ ಮಟಕಾದ ಓಸಿ ನಂಬರ ಬರೆದುಕೊಂಢು ಓಸಿ ಜೂಜಾಟದಲ್ಲಿ ತೊಡಗಿದಾಗ ಸಿಕ್ಕ ಅಪರಾಧ. ಈ ಬಗ್ಗೆ ಸಾ॥ತ॥ ಶ್ರೀಮತಿ ರೇಣುಕಾ ಜಕನೂರ ಪಿಎಸ್ಐ ಕೂಡಗಿ ಪಿಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 23.07,2021 ರಂದು ಕೂಡಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.